ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿಯನ್ನು ಇಂದು ದಿನಾಂಕ 10-10-2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿ ನಂ. 1 ರಿಂದ 6 ರವರ ಪರ ಶ್ರೀ. ಕೆ.ಬಿ.ಜಿ. ವಕೀಲರಿಂದ

1 ನೇ ಪ್ರತಿವಾದಿಗೆ 8 ಜನ ಮಕ್ಕಳಿದ್ದು, ಅವರುಗಳಲ್ಲಿ 5 ಜನ ಹೆಣ್ಣುಮಕ್ಕಳಿದ್ದು, 3 ಜನ ಗಂಡುಮಕ್ಕಳಿರುತ್ತಾರೆ. ಅವರುಗಳ ಹೆಸರು ಗಂಗಮ್ಮ, ಪಾರ್ವತಮ್ಮ, ಜಗದೇವಯ್ಯ, ರುದ್ರಮ್ಮ, ನಾಗಮ್ಮ, ರುದ್ರಯ್ಯ, ರಾಜೇಶ್ವರಿ ಮತ್ತು ನಿರಂಜನ್ ಇರುತ್ತಾರೆ. ಗಂಗಮ್ಮಳನ್ನು ಕುನ್ನಟಗಿ ಗ್ರಾಮದ ಶಿವಯ್ಯ ಈತನಿಗೆ ಮದುವೆ ಮಾಡಿಕೊಟ್ಟಿದ್ದರು. ನಾಗಮ್ಮ ಈಕೆಯನ್ನು ಹುಲಿಹೈದರ್ ಗ್ರಾಮದ ಸೋಮಶೇಖರ್ ಇವರಿಗೆ ಕೊಟ್ಟಿದ್ದರು. ಸದರಿ ಗಂಗಮ್ಮ ಮತ್ತು ನಾಗಮ್ಮ ನನ್ನ ಸಹೋದರಿಯರಿದ್ದು, ಅವರು ತೀರಿಕೊಂಡಿರುತ್ತಾರೆ. ಗಂಗಮ್ಮಳಿಗೆ ಇಬ್ಬರು ಮಕ್ಕಳಿದ್ದು, ಅವರುಗಳ ಹೆಸರು ಜಗದೇವಯ್ಯ ಮತ್ತು ಅಂಬಮ್ಮ. ನಾಗಮ್ಮಳಿಗೆ ಇಬ್ಬರು ಗಂಡುಮಕ್ಕಳು ಮತ್ತು ಇಬ್ಬರು ಹೆಣ್ಣುಮಕ್ಕಳಿರುತ್ತಾರೆ. ಅವರುಗಳ ಹೆಸರು ವೀರೇಶ, ಸಂಗಯ್ಯ, ಅಂಬಿಕಾ ಮತ್ತು ರಾಜೇಶ್ವರಿ ಇರುತ್ತಾರೆ. ನನ್ನ ಸಹೋದರಿಯರಾದ ಮೃತ ಗಂಗಮ್ಮ ಮತ್ತು ನಾಗಮ್ಮ ಇವರ ಮಕ್ಕಳನ್ನು ಮತ್ತು ಗಂಡಂದಿರನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿರುವುದಿಲ್ಲ ಎಂದರೆ ಸರಿ.

2 ನೇ ಪ್ರತಿವಾದಿಯ ಹೆಸರಿನಲ್ಲಿ ಯಾವುದೇ ಆಸ್ತಿಗಳು ಇರುವುದಿಲ್ಲ ಎಂದರೆ ಸರಿ. ಆದರೂ ಆಕೆಯನ್ನು ವಿನಾಃಕಾರಣ ಪಕ್ಷಗಾರಳಾಗಿ ಮಾಡಿರುತ್ತೇವೆ ಎಂದರೆ ಸರಿ. ನಮ್ಮ ಮನೆತನಕ್ಕೆ ಸೇರಿದ್ದವು ಎಂದು ಹೇಳಲಾದ ಮನೆ ಆಸ್ತಿಗಳನ್ನು ಮತ್ತು ನಿವೇಶನಗಳನ್ನು ಸೇರಿಸಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಯ ಹೆಸರಿನಲ್ಲಿ ಮನೆ ಇರುತ್ತದೆ

ಎಂದರೆ ಸರಿ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಮನೆಯ ಆಸ್ತಿಯು ನನಗೆ ಬೇಕಾಗಿಲ್ಲ ಎಂದು ನುಡಿಯುತ್ತಾರೆ.

ಈ ಸಂದರ್ಭದಲ್ಲಿ ಪಾಟೀ ಸವಾಲನ್ನು ನೋಡಲಾಗಿ ವಾದಿಯು ಈ ದಾವೆಯನ್ನು ದಾವಾ ಆಸ್ತಿಗಳಲ್ಲಿ ವಿಭಾಗ ಕೇಳಿ ಹೂಡಿದ್ದು, ವಾದಿಯು ತನ್ನ ದಾವೆಯಲ್ಲಿ ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಮತ್ತು ಪಿತ್ರಾರ್ಜಿತ ಆಸ್ತಿಗಳೆಂದು ಹೇಳಿದ್ದು, ಆದರೂ ವಾದಿ ತನ್ನ ಮೃತ ಸಹೋದರಿಯರಾದ ಗಂಗಮ್ಮ ಮತ್ತು ನಾಗಮ್ಮ ಇವರ ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಆದಕಾರಣ ಮುಂದಿನ ಪಾಟೀ ಸವಾಲನ್ನು ಮುಂದೂಡಲಾಯಿತು.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ. ಹೇ. ಕೇ. ಸರಿ ಇದೆ,

2 ನೇ ಅಪರ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ, ಸಿಂಧನೂರು.